**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕುಲಪತಿಗಳ ಸಭಾಂಗಣದಲ್ಲಿ ದಿನಾಂಕ 13–8–2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಪ್ರಥಮ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | | |
|---|---|---|---|
| 1 | ಡಾ. ಬಿ.ವಿ. ಪಾಟೀಲ | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2 | ಶ್ರೀ ಎನ್.ಸಿ. ಮುನಿಯಪ್ಪ | ಪ್ರಧಾನ ಕಾರ್ಯದರ್ಶಿ (ಕೃಷಿ) | ಸದಸ್ಯರು |
| 3 | ಶ್ರೀ ಬಾಬುರಾವ್ ಮುಡಬಿ | ಕೃಷಿ ಆಯುಕ್ತರು | ಸದಸ್ಯರು |
| 4 | ಶ್ರೀ ಗಣೇಶಮೂರ್ತಿ | ಪ್ರಧಾನ ಕಾರ್ಯದರ್ಶಿ (ಆರ್ಥಿಕ) ಇವರ ಪರವಾಗಿ ಉಪಕಾರ್ಯದರ್ಶಿ | ಸದಸ್ಯರು |
| 5 | ಶ್ರೀ ಭೋಜನಗೌಡ ಹೊಸಪೇಟೆ | ಪ್ರಗತಿಪರ ರೈತರು | ಸದಸ್ಯರು |
| 6 | ಶ್ರೀ ಶಂಕರಗೌಡ ಹರವಿ | ಪ್ರಗತಿಪರ ರೈತರು | ಸದಸ್ಯರು |
| 7 | ಶ್ರೀ ವೆಂಕನಗೌಡ ಮಲ್ಕಾಪುರ | ಪ್ರಗತಿಪರ ರೈತರು | ಸದಸ್ಯರು |
| 8 | ಶ್ರೀ ಶಿವಪ್ಪ ಬಲ್ಲಿದವ ದೇವದುರ್ಗ | ಪ್ರಗತಿಪರ ರೈತರು | ಸದಸ್ಯರು |
| 9 | ಶ್ರೀ ಹನುಮೇಶ ನಾಯಕ ಹುಲಿಹೈದರ್ | ಪ್ರಗತಿಪರ ರೈತರು | ಸದಸ್ಯರು |
| 10 | ಡಾ. ಚೆಲ್ಲಯ್ಯ, ಬೆಂಗಳೂರು | ಶಿಕ್ಷಣ ತಜ್ಞರು | ಸದಸ್ಯರು |
| 11 | ಶ್ರೀ ಬಸವರಾಜಪಾಟೀಲ ಇಟಗಿ | ಕೃಷಿ ಕೈಗಾರಿಕೋದ್ಯಮಿ | ಸದಸ್ಯರು |
| 12 | ಶ್ರೀಮತಿ ಆಶಾ ಶೇಷಾದ್ರಿ | ಸಮಾಜ ಸೇವಕರು | ಸದಸ್ಯರು |
| 13 | ಡಾ. ಎಸ್.ಜಿ. ಪಾಟೀಲ | ಡೀನ್ (ಕೃಷಿ) | ಸದಸ್ಯರು |
| 14 | ಡಾ. ಪಿ. ಬಾಲಕೃಷ್ಣನ್ | ಕುಲಸಚಿವರು | ಸದಸ್ಯ–ಕಾರ್ಯದರ್ಶಿ |

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ವ್ಯವಸ್ಥಾಪನಾ ಮಂಡಳಿಯ ಸಭೆಯು ಹೊಸ ಸದಸ್ಯರುಗಳಿಗೆ ಸಾಂಪ್ರದಾಯಿಕ ಸ್ವಾಗತದೊಂದಿಗೆ ಪ್ರಾರಂಭವಾಗಿ ಎಲ್ಲಾ ಸದಸ್ಯರುಗಳ ಪರಿಚಯ ಮಾಡಿಕೊಳ್ಳಲಾಯಿತು. ಡಾ. ಬಿ.ವಿ. ಪಾಟೀಲ, ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಹೂಗುಚ್ಛವನ್ನು ನೀಡುತ್ತಾ ಸದಸ್ಯರುಗಳಿಗೆ ಸ್ವಾಗತಿಸಿ ಈ ವ್ಯವಸ್ಥಾಪನಾ ಮಂಡಳಿಯ ಅವಧಿಯು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುವುದೆಂದು ಆಶಿಸಿದರು ಹಾಗೂ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸ್ಥಾಪನೆ ಕುರಿತು ವಿವರಣೆ ನೀಡಿದರು. ಇದು ವ್ಯವಸ್ಥಾಪನಾ ಮಂಡಳಿಯ ಪ್ರಥಮ ಸಭೆಯಾಗಿರುವುದರಿಂದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಸ್ತುತ ಸ್ಥಾನಮಾನ ಮತ್ತು ಕೈಗೊಂಡಿರುವ ಆಡಳಿತ, ಶೈಕ್ಷಣಿಕ, ಸಂಶೋಧನೆ, ವಿಸ್ತರಣೆ, ಹಣಕಾಸು, ಬೀಜೋತ್ಪಾದನೆ ಚಟುವಟಿಕೆಗಳು ಹಾಗೂ ಸಿವಿಲ್ ಕಾಮಗಾರಿಗಳ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಯಿತು. ಈ ಕೆಳಕಂಡ ಕಾರ್ಯಸೂಚಿಗಳ ಪ್ರಕಾರ ಕೃಷಿ ವಿಶ್ವವಿದ್ಯಾಲಯದ ವಿವಿಧ ಅಧಿಕಾರಿಗಳು ಸದರಿ ಮಾಹಿತಿಯನ್ನು ಒದಗಿಸುತ್ತಿರುವ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಈ ಕೆಳಗಿನಂತೆ ಸಲಹೆಗಳನ್ನು ನೀಡಿದರು.

**ಕಾರ್ಯಸೂಚಿ ಸಂ: 1 ರಿಂದ 7:**

**1. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ವ್ಯವಸ್ಥೆ ಹಾಗೂ ಶೈಕ್ಷಣಿಕ ಚಟುವಟಿಕೆಗಳು.**

**2. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಸಂಶೋಧನಾ ನಿರ್ದೇಶನಾಲಯದ ಚಟುವಟಿಕೆಗಳ ಮಾಹಿತಿ.**

3. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಬೀಜೋತ್ಪಾದನಾ ಚಟುವಟಿಕೆಗಳ ಮಾಹಿತಿ.

4. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ವಿಸ್ತರಣಾ ನಿರ್ದೇಶನಾಲಯದ ಚಟುವಟಿಕೆಗಳ ಮಾಹಿತಿ.

5. ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೈಗೊಂಡಿರುವ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಚಟುವಟಿಕೆಗಳ ಮಾಹಿತಿ.

6. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಹಣಕಾಸಿನ ಸ್ಥಿತಿಗತಿ ಬಗ್ಗೆ ಮಾಹಿತಿ.

7. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಕೈಗೊಂಡಿರುವ ಸಿವಿಲ್ ಕಾಮಗಾರಿಗಳ ಮಾಹಿತಿ.

*1) ಶ್ರೀ ಎನ್.ಸಿ. ಮುನಿಯಪ್ಪ, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರಕಾರ:*

- ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ರೈತರ ಸಮಸ್ಯೆಗಳ ಕುರಿತು ಹೆಚ್ಚು ಹೆಚ್ಚಿನ ಚರ್ಚೆ ಕೈಗೊಳ್ಳುವುದು.
- ವಿಜ್ಞಾನಿಗಳು ಕೈಗೊಳ್ಳುವ ವಿವಿಧ ಸಂಶೋಧನೆಗಳನ್ನು ಹಾಗೂ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ನೋಡಿಕೊಳ್ಳಲು ಸಲಹೆ ನೀಡಿದರು.
- ವಿವಿಧ ಕಾರ್ಯಗಳ ಹಣಕಾಸಿನ ವ್ಯವಹಾರಗಳಿಗೆ ಹಾಗೂ ಲೆಕ್ಕ ಪರಿಶೋಧನೆಗೆ ಆದ್ಯತೆ ನೀಡುವುದು.
- ಕೃಷಿ ವಿಶ್ವವಿದ್ಯಾಲಯ ಆಂತರಿಕ ಸಂಪನ್ಮೂಲಗಳ ವೃದ್ಧಿಗಾಗಿ ಪ್ರೋತ್ಸಾಹಿಸುವುದು / ಪ್ರಚೋದಿಸುವುದು.
- ವಿವಿಧ ಯೋಜನೆಗಳ ಅನುದಾನದ ಸದ್ಬಳಕೆ ಹಾಗೂ ಸದರಿ ಯೋಜನೆಗಳ ಲಾಭವನ್ನು ರೈತರಿಗೆ ಆಗುತ್ತಿರುವುದರ ಕುರಿತು ಮೌಲ್ಯಮಾಪನ ಕೈಗೊಳ್ಳುವುದು. ಯಾವುದೇ ಪರಿಣಾಮ / ಫಲಿತಾಂಶ ನೀಡದ ಯೋಜನೆಗಳನ್ನು ಕೈಬಿಡುವುದು.
- ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳ ಹಾಗೂ ಇತರೇ ಸಿಬ್ಬಂದಿಯವರನ್ನು ಹಂತಹಂತವಾಗಿ ಮೌಲ್ಯಮಾಪನ ಮಾಡುವುದರೊಂದಿಗೆ ಅವರ ಜವಾಬ್ದಾರಿ / ಹೊಣೆಗಾರಿಕೆಯ ಅರಿಕೆ ಮೂಡಿಸುವುದು.
- ಕೃಷಿ ಉಪಕರಣ ಹಾಗೂ ಯಂತ್ರೋಪಕರಣಗಳ ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಅವುಗಳ ಅಳವಡಿಕೆಗಾಗಿ ಆದ್ಯತೆ ನೀಡುವುದು.
- ಹಣಕಾಸಿನ ಸಮಿತಿಯಲ್ಲಿ ವಿವರವಾಗಿ ಪರಿಶಿಲಿಸಿದ ನಂತರವೇ ಹಣಕಾಸಿಗೆ ಸಂಬಂಧಪಟ್ಟ ಪ್ರಸ್ತಾವನೆಗಳನ್ನು ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆಗೆ ಮಂಡಿಸುವುದು.
- ಶಿಕ್ಷಕರುಗಳ ಮೌಲ್ಯಮಾಪನಕ್ಕಾಗಿ ಹಾಗೂ ರೈತರ ಉಪಯೋಗಕ್ಕಾಗಿ ಕೃಷಿ ವಿಶ್ವವಿದ್ಯಾಲಯ ಕೈಗೊಂಡ ಕಾರ್ಯ ಚಟುವಟಿಕೆಗಳು / ಶಿಕ್ಷಕರ ಸಾಧನೆಗಳನ್ನು ವೆಬ್‌ಸೈಟ್‌ನಲ್ಲಿ ಬಿತ್ತರಿಸುವುದು.

- ಸಂಶೋಧನಾ ಕಾರ್ಯಕ್ರಮಗಳನ್ನು ತಯಾರಿಸುವಾಗ ಕೃಷಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ಬೀಜ ನಿಗಮದ ಅಧಿಕಾರಿಗಳು, ಕೃಷಿ ಪಂಡಿತರು ಮತ್ತು ಪ್ರಗತಿಪರ ರೈತರನ್ನು ಸಂಪರ್ಕಿಸುವುದು, ಮತ್ತು ಅವರುಗಳನ್ನು ಭಾಗವಹಿಸುವಂತೆ ನೋಡಿಕೊಳ್ಳಲು ಸಲಹೆ ನೀಡಿದರು.
- ರೈತರ ಅನುಕೂಲಕ್ಕಾಗಿ ಈ ವರ್ಷದಿಂದಲೇ ಡಿಪ್ಲೋಮ / ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಆದ್ಯತೆ ಮೇರೆಗೆ ಪ್ರಾರಂಭಿಸಲು ಸಲಹೆ ನೀಡಿದರು.
- ಕೃಷಿ ಸಂಶೋಧನಾ ಕೇಂದ್ರಗಳಿಗೆ ಸಮೀಪವಿರುವ ಗ್ರಾಮ ಪಂಚಾಯತ್‌ಗಳಿಗೆ ಸಂಪರ್ಕಿಸಿ ವಿವಿಧ ಭೂ-ಅಭಿವೃದ್ಧಿ ಚಟುವಟಿಕೆಗಳಿಗಾಗಿ ಎಮ್.ಜಿ.ಎನ್.ಆರ್.ಇ.ಜಿ.ಎ. (MGNREGA) ಅಡಿಯಲ್ಲಿ ಧನಸಹಾಯ ಪಡೆಯುವುದು.
- ಆಯಾ ಭಾಗದ ರೈತರ ಅವಶ್ಯಕತೆಗಳಿಗೆ ತಕ್ಕಂತೆ ಮತ್ತು ಲಭ್ಯವಿರುವ ಪರಿಣಿತರನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳಲ್ಲಿನ ಅಧ್ಯಯನ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಸಲಹೆ ನೀಡಿದರು.
- ಏಕರೂಪದ ಸಂಶೋಧನೆಗಳನ್ನು ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕೈಗೊಳ್ಳದಂತೆ ನೋಡಿಕೊಳ್ಳುವುದು.
- ಒಳ್ಳೇಯ ಹಾಗೂ ಹೆಚ್ಚು ಅಂಕಗಳಿಸಿದ ಅಭ್ಯರ್ಥಿಗಳನ್ನು ಆಕರ್ಷಿಸಲು ಸೂಕ್ತ ಪ್ರಚಾರ ಕೈಗೊಳ್ಳುವುದು.
- ಕೃಷಿ ಪಂಡಿತರನ್ನು ಮತ್ತು ಯಶಸ್ವಿ ರೈತರನ್ನು ಆಹ್ವಾನಿಸಿ, ಅವರ ಸಲಹೆ ಪಡೆಯುವುದು, ಅವರ ಅನುಭವಗಳನ್ನು ರೈತರಿಗೆ, ವಿಜ್ಞಾನಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತಲುಪಿಸಲು, ಹಾಗೂ ಅವರುಗಳ ಯಶೋಗಾಥೆ ಕುರಿತು ಪುಸ್ತಕಗಳನ್ನು ಪ್ರಕಟಿಸಲು ಸಲಹೆ ನೀಡಿದರು.
- ಸಂದರ್ಶಕರಿಗೆ, ರೈತರಿಗೆ ಹಾಗೂ ಶಾಲಾ ಮಕ್ಕಳಿಗೆ ಉಪಯೋಗವಾಗುವ ಸಲುವಾಗಿ ನೈಜ ಬೆಳೆಗಳ ಪ್ರದರ್ಶನಾಲಯ / ಸಂಗ್ರಹಾಲಯವನ್ನು ಈ ಆವರಣದಲ್ಲಿ ಸ್ಥಾಪಿಸಲು ಸಲಹೆ ನೀಡಿದರು.

***2) ಶ್ರೀ ಬಾಬು ರಾವ್ ಮುಡಬಿ, ಕೃಷಿ ಆಯುಕ್ತರು, ಕರ್ನಾಟಕ ಸರಕಾರ:***

- ಸಮಗ್ರ ಕೃಷಿ ಪದ್ಧತಿ ಮಾದರಿಗಳನ್ನು ರೈತರ ಉಪಯೋಗಕ್ಕಾಗಿ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಲು ಸಲಹೆ ನೀಡಿದರು.
- ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಹೈ.ಕ.ಅ.ಮಂ.ಯ ಆರು ಜಿಲ್ಲೆಗಳ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯನ್ನು ತಯಾರಿಸಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಅನುದಾನ / ಧನಸಹಾಯ ಪಡೆಯಲು ಸಲಹೆ ನೀಡಿದರು.

***3) ಶ್ರೀ ಗಣೇಶಮೂರ್ತಿ, ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರಕಾರ:***

- ಯೋಜನೆ ಮತ್ತು ಯೋಜನೇತರ ಅನುದಾನ, ಭಾರತ ಸರಕಾರದ ಅನುದಾನ ಹಾಗೂ ಇತರೇ ಯೋಜನೆಗಳ ಅನುದಾನಗಳಲ್ಲದೇ ಜಮಾ ಮತ್ತು ಖರ್ಚಿನ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಲು ಸಲಹೆ ನೀಡಿದರು.

- ಆರ್ಥಿಕ ಹೊರೆ ಒಳಗೊಂಡಿರುವ ಎಲ್ಲಾ ಪ್ರಸ್ತಾವನೆಗಳನ್ನು ಪ್ರಾಜ್ಞ ಪರಿಷತ್ತು ಮತ್ತು ಹಣಕಾಸಿನ ಸಮಿತಿ ಸಭೆಯಲ್ಲಿ ಚರ್ಚಿಸಿ ವ್ಯವಸ್ಥಾಪನಾ ಮಂಡಳಿಯ ಸಭೆಯ ಕಾರ್ಯಸೂಚಿಯಲ್ಲಿ ಸಂಪೂರ್ಣ ವಿವರಗಳೊಂದಿಗೆ ಮಂಡಿಸಲು ಸಲಹೆ ನೀಡಿದರು.
- ಬಜೆಟ್ ತಯಾರಿಸುವಾಗ ವಿವಿದ ಖಂಡಿಕೆಗಳಲ್ಲಿ ಸೂಕ್ತವಾದ ಮತ್ತು ಸರಿಯಾದ ಯೋಜನೆ ಮಾಡುವುದು.

*4) ಡಾ. ಚೆಲ್ಲಯ್ಯ :*

- ವಿದ್ಯಾರ್ಥಿಗಳ ಮೂಲಭೂತ ಸೌಕರ್ಯ ಹಾಗೂ ಸೌಲಭ್ಯಗಳನ್ನು ಸುಧಾರಿಸುವಲ್ಲಿ ಒತ್ತು ನೀಡುವುದು.
- ಬೀಜೋತ್ಪಾದನಾ ಘಟಕಗಳಲ್ಲಿ ತೇವಾಂಶವನ್ನು ತಪ್ಪಿಸಲು ಸರಿಯಾದ ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಿದರು.
- ಕೃಷಿ ವಿಷಯವನ್ನು ಪ್ರೌಢ ಶಾಲೆಗಳಲ್ಲಿ ಸೇರಿಸುವುದರಿಂದ ಅಭ್ಯರ್ಥಿಗಳು ಹೆಚ್ಚು ಅಂಕಗಳಿಸಿ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುವ ಸಲುವಾಗಿ ಅನುಕೂಲವಾಗುವುದೆಂದು ಸಲಹೆ ನೀಡಿದರು.
- ಕೃಷಿ ಸಾಧನೆ–ಸಲಕರಣೆಗಳನ್ನು ವಿತರಿಸುವ ಸಂದರ್ಭಗಳಲ್ಲಿ ಕೃಷಿ ಪದವೀಧರರನ್ನು ಅಥಾವ ಕೃಷಿಯಲ್ಲಿ ತರಬೇತಿ ಹೊಂದಿದವರು ಇದ್ದಲ್ಲಿ ಅನುಕೂಲವಾಗುವುದೆಂದು ಸಲಹೆ ನೀಡಿದರು.
- ಕೃಷಿ ವಿಶ್ವವಿದ್ಯಾಲಯದ ಭೂ ದಾಖಲಾತಿಗಳನ್ನು ಸುಸ್ಥಿತಿಯಲ್ಲಿಡಲು ಸಲಹೆ ನೀಡಿದರು.

*5) ಶ್ರೀಮತಿ ಆಶಾ ಶೇಷಾದ್ರಿ :*

- ಕೃಷಿ ವಿಶ್ವವಿದ್ಯಾಲಯದಲ್ಲಿ ಸಿವಿಲ್ ಕಾಮಗಾರಿಗಳನ್ನು ಯೋಜಿಸುವಾಗ ಸಸಿಗಳನ್ನು ನೆಡುವುದು ಮತ್ತು ಉದ್ಯಾನವನವನ್ನು ಸ್ಥಾಪಿಸುವಲ್ಲಿ ಜಾಗರೋಕತೆ ವಹಿಸುವುದು.
- ವಿವಿಧ ಅಭಿವೃದ್ಧಿ ಹೊಂದಿದ ತಳಿಗಳು, ಸಸಿಗಳು, ಪುಷ್ಪಗಳು ಹಾಗೂ ತಂತ್ರಜ್ಞಾನಗಳನ್ನು ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಸಲುವಾಗಿ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶನಾಲಯ ರೂಪಪದಲ್ಲಿ ಪ್ರದರ್ಶಿಸಲು ಸಲಹೆ ನೀಡಿದರು.

*6) ಶ್ರೀ ಶಂಕರಗೌಡ ಹರವಿ :*

- ಭಾರತ ಸರಕಾರದ ದರರಹಿತ ಸಂಖ್ಯೆ 1551 ರ ಸೇವೆಯಂತೆ, ರೈತರ ಸಮಸ್ಯೆಗಳಿಗೆ 24 ಗಂಟೆಗಳ ಕಾಲ ಪರಿಹಾರ ನೀಡಲು ಸಹಾಯವಾಣಿ ಸ್ಥಾಪಿಸಲು ವಿಶ್ವವಿದ್ಯಾಲಯವು ಚಿಂತನೆ ಮಾಡಬೇಕೆಂದು ಸಲಹೆ ನೀಡಿದರು.
- ಕೃಷಿ ವಿಜ್ಞಾನ ಕೇಂದ್ರಗಳಿಂದ ರೈತರುಗಳಿಗೆ ಪ್ರವಾಸ ಕೈಗೊಂಡು ಯಶಸ್ವೀ ರೈತರ ಹೊಲಗಳಿಗೆ ಸಂದರ್ಶಿಸುವುದು.

- ಕುಂದುತ್ತಿರುವ ಶೇಂಗಾ ಇಳುವರಿಯನ್ನು ಹೆಚ್ಚಿಸಲು ಪರಿಹಾರ ಕಂಡುಕೊಳ್ಳಲು ಕ್ರಮಕೈಗೊಳ್ಳಬೇಕೆಂದು ಸಲಹೆ ನೀಡಿದರು.
- ಕೃಷಿಯಲ್ಲಿ ಅಭ್ಯಾಸ ಮಾಡಲು ಆಸಕ್ತಿ ಹೊಂದಿರುವವರಿಗೆ ವಿಶ್ವವಿದ್ಯಾಲಯದಲ್ಲಿ ಪ್ರವೇಶಕ್ಕಾಗಿ ಪೇಮೆಂಟ್ ಸೀಟುಗಳನ್ನು ಕಾಯ್ದಿರಿಸಲು ಸಲಹೆ ನೀಡಿದರು.
- ರೈತರ ಅನುಕೂಲಕ್ಕಾಗಿ ಕೃಷಿ ಸಾಧನ–ಸಲಕರಣೆಗಳ ಗುಣವತ್ತತೆಯನ್ನು ಕಾಪಡಿಕೊಳ್ಳಲು ಸಲಹೆ ನೀಡಿದರು.
- ಬೀಜದಿಂದ – ಮಾರುಕಟ್ಟೆವರೆಗಿನ ಚಟುವಟಿಕೆಗಳನ್ನು ರೈತರಿಗೆ ಮನದಟ್ಟಾಗುವಂತಹ ತಂತ್ರಜ್ಞಾನಗಳ ಬಗ್ಗೆ ತೀವ್ರತರ ಪ್ರದರ್ಶನಗಳನ್ನು ರೈತರ ಹೊಲಗಳಲ್ಲಿ ಕೈಗೊಳ್ಳಲು ಸಲಹೆ ನೀಡಿದರು.

*7) ಶ್ರೀ ಶಿವಪ್ಪ ಬಲ್ಲಿದವ :*

- ಕೃಷಿ ಸಾಧನ–ಸಲಕರಣೆಗಳನ್ನು ರೈತರ ಅನುಕೂಲಕ್ಕಾಗಿ ವಿತರಿಸುವಾಗ ಈ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಭಾಗಗಳನ್ನು ಪರಿಗಣಿಸಲು ಸಲಹೆ ನೀಡಿದರು.

*8) ಶ್ರೀ ಹನುಮೇಶ ನಾಯಕ್ :*

- ಕೃಷಿ ತಂತ್ರಜ್ಞಾನಗಳು ರೈತರ ಮನಮುಟ್ಟುವಂತೆ ಹೆಚ್ಚು ಹೆಚ್ಚಿನ ಪ್ರದರ್ಶನಗಳನ್ನು ಕೈಗೊಳ್ಳಲು ಸಲಹೆ ನೀಡಿದರು.
- ಸಾಮನ್ಯವಾಗಿ ಕೃಷಿ ಯಂತ್ರೋಪಕರಣಗಳನ್ನು ಹಾಗೂ ವಿಶೇಷವಾಗಿ ಶೇಂಗಾ ಕೊಯ್ಲು ಯಂತ್ರವನ್ನು ಗುರುತಿಸಲು ಸಲಹೆ ನೀಡಿದರು.

*9) ಶ್ರೀ ಭೋಜನಗೌಡ :*

- ಸೂರ್ಯಕಾಂತಿ ಬೆಳೆಯನ್ನು ತೀವ್ರತರವಾಗಿ ಬೆಳೆಯಲು ಸಂಶೋಧನೆಯನ್ನು ಕೈಗೊಳ್ಳಲು ಸಲಹೆ ನೀಡಿದರು.

*10) ಶ್ರೀ ಬಸವರಾಜ ಪಾಟೀಲ ಇಟಗಿ :*

- ಏಳನೇ ತರಗತಿ ನಂತರ ಪ್ರೌಢ ಶಾಲೆಗಳಲ್ಲಿ ಐಚ್ಛಿಕವಾಗಿ ಕೃಷಿ ವಿಷಯವೆಂದು ಸೇರಿಸಲು ಸಲಹೆ ನೀಡಿದರು. ಇದಕ್ಕೆ ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಸದರಿ ವಿಷಯವನ್ನು ಸರಕಾರದ ಮಟ್ಟದಲ್ಲಿ ಚರ್ಚಿಸಲು ಒಪ್ಪಿಗೆ ಸೂಚಿಸಿದರು.
- ಮೂರು ಕೃಷಿ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಮೂಲಭೂತ ಸೌಕರ್ಯಗಳನ್ನು ತುಲನೆ ಮಾಡಲು ಪ್ರಧಾನ ಕಾರ್ಯದರ್ಶಿಗಳು (ಕೃಷಿ) ಇವರಲ್ಲಿ ವಿನಂತಿಸುತ್ತಾ ಹೊಸದಾಗಿ ಸ್ಥಾಪಿತವಾಗಿರುವ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಅಭಿವೃದ್ಧಿಗಾಗಿ ಸಮಾನಾಂತರವಾದ ಅನುದಾನ ನೀಡಲು ಕೋರಿದರು.

- ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಮುಂಬರುವ 2–3 ವರ್ಷಗಳಿಗೆ ಬೇಕಾಗುವ ಅನುದಾನವನ್ನು ಸರಕರದಿಂದ ಪಡೆಯುವ ಸಲುವಾಗಿ ಮುನ್ನೋಟ ಯೋಜನೆಯನ್ನು ತಯಾರಿಸಲು ಸಲಹೆ ನೀಡಿದರು.

**ಕಾರ್ಯಸೂಚಿ ಸಂ: 8: ಗಂಗಾವತಿ ಮತ್ತು ಗುಲ್ಬರ್ಗಾದಲ್ಲಿರುವ ವಿಸ್ತರಣಾ ಶಿಕ್ಷಣ ಘಟಕಗಳನ್ನು ಕ್ರಮವಾಗಿ ಲಿಂಗಸುಗೂರು ಮತ್ತು ಕೊಪ್ಪಳಕ್ಕೆ ಸ್ಥಳಾಂತರಿಸುವುದು.**

ಗಂಗಾವತಿ ಮತ್ತು ಗುಲ್ಬರ್ಗಾದಲ್ಲಿರುವ ವಿಸ್ತರಣಾ ಶಿಕ್ಷಣ ಘಟಕಗಳನ್ನು ಕ್ರಮವಾಗಿ ಲಿಂಗಸುಗೂರು ಮತ್ತು ಕೊಪ್ಪಳಕ್ಕೆ ರೈತರ ಹಿತದೃಷ್ಟಿಯಿಂದ ಸ್ಥಳಾಂತರಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುತದಿಂದ ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 9: ಗುತ್ತಿಗೆ ಆದಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ (ಸಹಾಯಕ ಪ್ರಾಧ್ಯಾಪಕರ ಪದವೃಂದ) ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.**

ಗುತ್ತಿಗೆ ಆದಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ (ಸಹಾಯಕ ಪ್ರಾಧ್ಯಾಪಕರ ಪದವೃಂದ) ಮಾಸಿಕ ಗೌರವಧನವನ್ನು ಕೃವಿವಿ ಬೆಂಗಳೂರು ಹಾಗೂ ತೋವಿವಿ ಬಾಗಲಕೋಟೆಗೆ ಸಮಾನಾಂತರವಾಗಿ ತಿಂಗಳಿಗೆ ರೂ. 17,000/– ಎಂ.ಎಸ್ಸಿ./ಎಂ.ಟೆಕ್. ಪದವೀಧರರಿಗೆ ಮತ್ತು ರೂ. 18,000/– ಪಿ.ಎಚ್.ಡಿ. ಪದವೀಧರರಿಗೆ ಹೆಚ್ಚಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುತದಿಂದ ಒಪ್ಪಿಗೆ ಸೂಚಿಸಿತು. ಹಾಗೂ ಪಿ.ಎಚ್.ಡಿ. ಪದವೀಧರರಿಗೆ ಗೌರವಧನವನ್ನು ಹೆಚ್ಚಿಸುವ ವಿಷಯವು ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಕರಿಗೆ ಅನ್ವಯಿಸುವುದರಿಂದ ಇದನ್ನು ಸಮನ್ವಯ ಸಮಿತಿಯಲ್ಲಿ ಮಂಡಿಸಲು ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.

**ಕಾರ್ಯಸೂಚಿ ಸಂ: 10: ಸಲಹೆಗಾರರಿಗೆ ಗೌರವಧನ ಹೆಚ್ಚಿಸುವ ಕುರಿತು.**

ವ್ಯವಸ್ಥಾಪನಾ ಮಂಡಳಿಯು ಸಲಹೆಗಾರರಿಗೆ ಗೌರವಧನವನ್ನು ಹೆಚ್ಚಿಸಲು ನಿರಾಕರಿಸಿತು, ಆದರೆ ಸದರಿಯವರನ್ನು ಡಿಸೆಂಬರ್–2010 ವರೆಗೆ ಕಾರ್ಯನಿರ್ಹಿಸಲು ಒಪ್ಪಿಗೆ ಸೂಚಿಸಿದರು. ಆದಾಗ್ಯೂ ಅತಿ ಅವಶ್ಯಕವಿದ್ದಲ್ಲಿ ಮಾತ್ರ ಇನ್ನೂ ಕೆಲ ಸಮಯದವರೆಗೆ ಮುಂದುವರೆಸಲು ಸಲಹೆ ನೀಡಿದರು. ಸಲಹೆಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬದಲು ಯುವಕರನ್ನು ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ಸಲಹೆ ನೀಡಿದರು.

**ಕಾರ್ಯಸೂಚಿ ಸಂ: 11 ಮತ್ತು 12:**

**ಕಾರ್ಯಸೂಚಿ ಸಂ: 11: ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು**

**ಕಾರ್ಯಸೂಚಿ ಸಂ: 12: ಗಿರಿಜನ ಉಪ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು**

ಸದರಿ ಪ್ರಸ್ತಾವನೆಗಳಿಗೆ ವ್ಯವಸ್ಥಾಪನಾ ಮಂಡಳಿಯು ಸರ್ವಾನುತದಿಂದ ಒಪ್ಪಿಗೆ ಸೂಚಿಸಿ ಮಾನ್ಯ ಕುಲಪತಿಗಳವರಿಗೆ ಅವಶ್ಯಕತೆ ಇದ್ದಾಗ ಹಣಕಾಸಿನ ಮಂಜೂರಾತಿ ನೀಡಲು ಅಧಿಕಾರ ನೀಡಿದರು.

**ಕಾರ್ಯಸೂಚಿ ಸಂ: 13: ಅಧಿಕಾರ ನಿಯೋಜನೆಯಿಂದ ಸಿಬ್ಬಂದಿಯವರಿಗೆ (ಶಿಕ್ಷಕರು/ಶಿಕ್ಷಕೇತರರು) ವೈದ್ಯಕೀಯ ವೆಚ್ಚ ಹಿಂತಿರುಗಿ ಕೊಡುವುದಕ್ಕೆ ಮಂಜೂರಾತಿ ಹಾಗೂ ಇದಕ್ಕಾಗಿ ಆಸ್ಪತ್ರೆಗಳ ಮಾನ್ಯತೆ ಕುರಿತು.**

ಅಧಿಕಾರ ನಿಯೋಜನೆಯಿಂದ ಸಿಬ್ಬಂದಿಯವರಿಗೆ (ಶಿಕ್ಷಕರು/ಶಿಕ್ಷಕೇತರರು) ವೈದ್ಯಕೀಯ ವೆಚ್ಚ ಹಿಂತಿರುಗಿ ಕೊಡುವುದಕ್ಕೆ ಮಂಜೂರಾತಿ ನೀಡಲು ಮಾನ್ಯ ಕುಲಪತಿಗಳವರಿಗೆ ಅಧಿಕಾರ ನೀಡಿದರು. ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲದೆ ಯಾದಿಯಲ್ಲಿ ಸಲ್ಲಿಸಿದ ಆಸ್ಪತ್ರೆಗಳನ್ನು ಸೇರ್ಪಡೆ ಮಾಡಿ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮತ್ತು ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸುವಾಗ ಕರ್ನಾಟಕ ನಾಗರಿಕಾ ಸೇವಾ ನಿಯಮಾವಳಿಗಳನ್ನು ಅನುಸರಿಸಲು ಸಲಹೆ ನೀಡಿದರು. ಅಲ್ಲದೆ, ಪಟ್ಟಣ ಬಿಟ್ಟು ದೂರವಿರುವ ಸಂಶೋಧನಾ ಕೇಂದ್ರಗಳ ಹತ್ತಿರವಿರುವ ಆಸ್ಪತ್ರೆಗಳಿಗೂ ಸಹ ಮಾನ್ಯತೆ ನೀಡಲು ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 14: ಯು.ಜಿ.ಸಿ. ವೇತನ ಪಡೆಯುತ್ತಿರುವ ಶಿಕ್ಷಕರಿಗೆ ಪ್ರಭಾರ ಭತ್ಯ ಮಂಜೂರು ಮಾಡುವ ಕುರಿತು.**

ಯು.ಜಿ.ಸಿ. ವೇತನ ಪಡೆಯುತ್ತಿರುವ ಶಿಕ್ಷಕರಿಗೆ ಪ್ರಭಾರ ಭತ್ಯ ಮಂಜೂರು ಮಾಡಲು ವ್ಯವಸ್ಥಾಪನಾ ಮಂಡಳಿಯು ನಿರಾಕರಿಸಿತು. ಆದಾಗ್ಯೂ, ಈ ವಿಷಯವು ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಕರಿಗೆ ಅನ್ವಯಿಸುವುದರಿಂದ ಇದನ್ನು ಸಮನ್ವಯ ಸಮಿತಿಯಲ್ಲಿ ಮಂಡಿಸಲು ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.

**ಕಾರ್ಯಸೂಚಿ ಸಂ: 15: ಶ್ರೀ ಎ.ಎಸ್. ಪಾಟೀಲ್, ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿಗಳವರಿಗೆ ವಿಶೇಷ ಭತ್ಯ/ ಪ್ರೋತ್ಸಾಹ ಭತ್ಯ ಮಂಜೂರು ಕುರಿತು.**

ವ್ಯವಸ್ಥಾಪನಾ ಮಂಡಳಿಯು ಶ್ರೀ ಎ.ಎಸ್. ಪಾಟೀಲ್, ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿಗಳವರಿಗೆ ಶೇಕಡ 15 ರಷ್ಟು ಪ್ರೋತ್ಸಾಹ ಭತ್ಯ ನೀಡುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 16: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸೇವಾ ಸಿಬ್ಬಂದಿಯವರ ಸ್ಕೋರ್ ಕಾರ್ಡ.**

ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸೇವಾ ಸಿಬ್ಬಂದಿಯವರ ನೇಮಕಾತಿಗಾಗಿ ಸ್ಕೋರ್ ಕಾರ್ಡ ಪ್ರಸ್ತಾವನೆಗೆ ಒಪ್ಪಿಗೆ ನೀಡಿತು ಹಾಗೂ ಅಭ್ಯರ್ಥಿಯ ವ್ಯಕ್ತಿತ್ವಕ್ಕೆ ನೀಡುವ ಅಂಕಗಳ ಕುರಿತು ಚರ್ಚಿಸಲು ಸಮನ್ವಯ ಸಮಿತಿಯಲ್ಲಿ ಮಂಡಿಸಲು ಸಹ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.

**ಕಾರ್ಯಸೂಚಿ ಸಂ: 17: ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು**

ದೀರ್ಘವಾದ ಚರ್ಚೆಯ ನಂತರ ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿತು. ಇನ್ನು ಮುಂದೆ ಲಭ್ಯವಿರುವ ಅನುದಾನದ ಪ್ರಕಾರ ವಿವಿಧ ಕೇಂದ್ರಗಳಲ್ಲಿ

ಕೈಗೊಳ್ಳಬೇಕಾದ ಸಿವಿಲ್ ಕಾಮಗಾರಿಗಳ ಯಾದಿಯನ್ನು ಹಾಗೂ ಅಂದಾಜು ಪಟ್ಟಿಯನ್ನು ತಯಾರು ಮಾಡಿ, ಹಣಕಾಸು ಸಮಿತಿ ಒಪ್ಪಿಗೆ ಪಡೆದ ನಂತರ ಅದನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಲು ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.

**ಕಾರ್ಯಸೂಚಿ ಸಂ: 18: ಕೃವಿವಿ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರವರಿಗೆ ಪ್ರವಾಸ ಭತ್ಯ, ತುಟ್ಟಿ ಭತ್ಯ ಮತ್ತು ಆಸೀನ ಭತ್ಯ ಕೊಡುವ ಮಾಹಿತಿ ಕುರಿತು**

ಕೃವಿವಿ ಧಾರವಾಡದಲ್ಲಿ ಅನುಸರಿಸುವಂತೆ ಕೃವಿವಿ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರವರಿಗೆ ಪ್ರವಾಸ ಭತ್ಯ, ತುಟ್ಟಿ ಭತ್ಯ ಮತ್ತು ಆಸೀನ ಭತ್ಯಯನ್ನು ಕೊಡುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 19: ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ರಚನೆ ಮಾಡುವವರೆಗೆ ಕೃ.ವಿ.ವಿ. ಧಾರವಾಡದ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ಅಂಗೀಕರಿಸುವುದು ಮತ್ತು ಪಾಲಿಸುವುದು.**

ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ರಚನೆ ಮಾಡುವವರೆಗೆ ಕೃ.ವಿ.ವಿ. ಧಾರವಾಡದ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ಅಂಗೀಕರಿಸುವ ಮತ್ತು ಪಾಲಿಸುವ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1) ಕರ್ನಾಟಕ ಕಾಯ್ದೆ ಸಂ. 10/2010 ರ ಪ್ರಕಾರ ಹಾಗೂ ಕೃಷಿ ವಿಶ್ವವಿದ್ಯಾಲಯ ಕಾಯ್ದೆ 2009 ರ ಮೇರೆಗೆ ಒಬ್ಬ ಅಧಿಕಾರೇತರ ಸದಸ್ಯರನ್ನೊಳಗೊಂಡ ಹಣಕಾಸು ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಸಭೆಯ ಗಮನಕ್ಕೆ ತಂದು ಸರ್ವಾನುಮತದಿಂದ ಒಬ್ಬ ಅಧಿಕಾರೇತರ ಸದಸ್ಯರ ಹೆಸರನ್ನು ಸೂಚಿಸಲು ವಿನಂತಿಸಿಕೊಂಡರು. ತದನಂತರ, ವ್ಯವಸ್ಥಾಪನಾ ಮಂಡಳಿಯ ಬಹುತೇಕ ಸದಸ್ಯರು ಶ್ರೀ ಭೋಜನಗೌಡ, ಹೊಸಪೇಟೆ ಗ್ರಾಮ, ರಾಯಚೂರು ಇವರ ಹೆಸರನ್ನು ಹಣಕಾಸು ಸಮಿತಿಗೆ ಅಧಿಕಾರೇತರ ಸದಸ್ಯರೆಂದು ಅನುಮೋದಿಸಿದರು.
2) ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯನ್ನು ತಾತ್ಕಾಲಿಕವಾಗಿ ಅಕ್ಟೋಬರ್–2010 ಆದಿಯಲ್ಲಿ ಕರೆಯಲು ನಿರ್ಧರಿಸಲಾಯಿತು.
3) ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳ ಗುಂಪು ವಿವಿಧ ಕೃಷಿ ಸಂಶೋಧನಾ ಕೇಂದ್ರಗಳಿಗೆ ಸೆಪ್ಟಂಬರ್ ಕೊನೆಯ ವಾರದಲ್ಲಿ ಅಥವ ಅಕ್ಟೋಬರ್–2010 ರಲ್ಲಿ ಭೇಟಿ ನೀಡಲು ವ್ಯವಸ್ಥೆ ಮಾಡಲಾಗುವುದು.

4) ಅಕ್ಟೋಬರ್–2010 ರಲ್ಲಿ ಏರ್ಪಡಿಸಲಾಗುವ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಉದ್ಘಾಟನೆ, ರಾಯಚೂರಿನ ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ರಜತ (ಪ್ಲಾಟಿನಮ್) ಮಹೋತ್ಸವ ಹಾಗೂ ರಾಯಚೂರಿನ ಕೃಷಿ ಮಹಾವಿದ್ಯಾಲಯದ ಬೆಳ್ಳಿ ಮಹೋತ್ಸವಕ್ಕೆ ಘನವೆತ್ತ ಕರ್ನಾಟಕದ ರಾಜ್ಯಪಾಲರನ್ನು ಮತ್ತು ಕರ್ನಾಟಕ ಸರಕಾರದ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಆಹ್ವಾನಿಸಲು ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ನೀಡಿತು. ಹಾಗೂ ಈ ಕಾರ್ಯಕ್ರಮಕ್ಕೆ ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಮಾನ್ಯ ಕುಲಪತಿಗಳವರಿಗೆ ವ್ಯವಸ್ಥಾಪನಾ ಮಂಡಳಿಯು ಅನುಮತಿ ನೀಡಿದೆ.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

(ಪಿ. ಬಾಲಕೃಷ್ಣನ್)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಆದರಪೂರ್ವಕ ಪ್ರತಿಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳು, ಕೃವಿವಿ ರಾಯಚೂರು ಇವರುಗಳಿಗೆ.

ಪ್ರತಿಯನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು ಇವರಿಗೆ ಸಲ್ಲಿಸಲಾಗಿದೆ.